ಇ-ಮೇಲ್ :drsyndicateku@gmail.com

ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-2 343 :2024-25 ದಿನಾಂಕ:06-12-2024

## ಸುತ್ತೋಲೆ

ವಿಷಯ: ಸಮಾಜ ವಿಜ್ಞಾನಗಳ ಐಚ್ಛಿಕ ವಿಷಯಗಳಿಗೆ ಕಾರ್ಯಭಾರ ನಿಗದಿಪಡಿಸುವ ಕುರಿತು.

ಉಲ್ಲೇಖ: 1) ಕುವಿ:ಯುಎಟಿ-2: 300 :2024-25 ದಿನಾಂಕ:12-11-2024
2) ಕುವೆಂಪು ವಿಶ್ವವಿದ್ಯಾಲಯ ಸಮಾಜಶಾಸ್ತ್ರ ಕಾಲೇಜು ಅಧ್ಯಾಪಕರ ಸಂಘದ ಮನವಿ ದಿನಾಂಕ: 26-11-2024.
3) ಮಾನ್ಯ ಕುಲಪತಿಗಳ ಆದೇಶದ ದಿನಾಂಕ:29-11-2024

....

2024-25ನೇ ಸಾಲಿನಿಂದ ಜಾರಿಯಾಗಿರುವ ಎಸ್.ಇ.ಪಿ. ಪಠ್ಯಕ್ರಮಪಡಿ ಎಲ್ಲಾ ಸಮಾಜ ವಿಜ್ಞಾನಗಳ ಐಚ್ಛಿಕ ವಿಷಯಗಳ ಕಾರ್ಯಭಾರವನ್ನು ದಿನಾಂಕ: 08-05-2024ರ ಸರ್ಕಾರದ ಆದೇಶದಂತೆ 05 ಕ್ರೆಡಿಟ್ಸ್‌ಗೆ 05 ಗಂಟೆಗಳ ಕಾರ್ಯಭಾರವನ್ನು ನಿಗಧಿಪಡಿಸಲಾಗಿರುತ್ತದೆ. 05 ಗಂಟೆಗಳ ಕಾರ್ಯಭಾರವನ್ನು ಈ ಹಿಂದಿನಂತೆಯೇ 06 ಗಂಟೆಗೆ ನಿಗಧಿಪಡಿಸುವಂತೆ ಅಧ್ಯಾಪಕರುಗಳ ಸಂಘಗಳಿಂದ ಬಂದ ಕೋರಿಕೆಯ ಹಿನ್ನಲೆಯಲ್ಲಿ ದಿನಾಂಕ: 29-10-2024 ರಂದು ಮಾನ್ಯಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನರುಗಳ ಸಭೆಯ ನಿರ್ಣಯದಂತೆ, ಹೆಚ್ಚಿಸಲಾಗುವ 01 ಗಂಟೆಯ ಕಾರ್ಯಭಾರಕ್ಕೆ ವಿದ್ಯಾರ್ಥಿಗಳಿಂದ ಯಾವ ರೀತಿ ಚಟುವಟಿಕೆ ಮಾಡಿಸುತ್ತಾರೆ ಎಂಬ ಕುರಿತು ವರದಿಯನ್ನು ಪ್ರಾಂಶುಪಾಲರುಗಳಿಂದ ಪಡೆದು , ಅಧ್ಯಯನ ಮಂಡಳಿಯಲ್ಲಿ ಈ ಬಗ್ಗೆ ತೀರ್ಮಾನ ಪಡೆಯಲು ನಿರ್ಣಯವಾಗಿತ್ತು. ಅದರಂತೆ ಈಗಾಗಲೇ ಸಂಬಂಧಿಸಿದ ಅಧ್ಯಯನ ಮಂಡಳಿ ಸಭೆಗಳು ನಡೆದು ನಡಾವಳಿಗಳು ಸ್ವೀಕೃತವಾಗುತ್ತಿವೆ.

ಉಲ್ಲೇಖ(03) ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಕುವೆಂಪು ವಿಶ್ವವಿದ್ಯಾಲಯದ ವ್ಯಾಪಿಯ ಸ್ನಾತಕ ಪದವಿಯ 01ನೇ ಮತ್ತು 02ನೇ ಸೆಮಿಸ್ಟರ್ ಸಮಾಜ ವಿಜ್ಞಾನಗಳ ಐಚ್ಛಿಕ ವಿಷಯಗಳ ಬೋಧನಾ ಅವಧಿಯನ್ನು 05 ಗಂಟೆಯಿಂದ 06 ಗಂಟೆಗೆ ಹೆಚ್ಚಿಸಲಾಗಿದೆ. ಹೆಚ್ಚುವರಿ ಮಾಡಲಾದ 01 ಗಂಟೆಯ ಅವಧಿಗೆ ಕಾಲೇಜುಗಳ ಪ್ರಾಂಶುಪಾಲರುಗಳು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ವರದಿಯನುಸಾರ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಚಟುವಟಿಕೆಯನ್ನು ನಿಗಧಿಪಡಿಸುವುದು ಕಡ್ಡಾಯವಾಗಿರುತ್ತದೆ.

6/12/24

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

01. ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
02. ಕಲಾ ನಿಕಾಯದ ಎಲ್ಲಾ ಬಿ.ಓ.ಎಸ್. ಅಧ್ಯಕ್ಷರುಗಳಿಗೆ.

<u>ಪ್ರತಿಗಳು:</u>

1) ಎಲ್ಲಾ ನಿಕಾಯದ ಡೀನರುಗಳಿಗೆ , ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2) ಆಪ್ತ ಸಹಾಯಕರು ಕುಲಪತಿ:ಕುಲಸಚಿವ: ಕುಲಸಚಿವ(ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3) ಉಪಕುಲಸಚಿವರು(ಹೆ.ಪ್ರ), ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
4) ಕಛೇರಿ ಪ್ರತಿ.